INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-8, Issue -01,January-February, 2026
Page No,58-67
Peer -Reviewed, Refereed Journal

# ಅಂಬೇಡ್ಕರ್ ಮತ್ತು ನಾಗರಿಕ ಸಮಾಜ: ಪುನರ್ ಪರಿವೀಕ್ಷಣೆ

ಡಾ.ಎಂ.ರಾಚಪ್ಪಾಜಿ.[1]

**ಅಮೂರ್ತ:**-ಅಂಬೇಡ್ಕರ್ ಅವರ ನಾಗರಿಕ ಸಮಾಜದ ಪರಿಕಲ್ಪನೆಯನ್ನು ತಾತ್ವಿಕ, ಸಾಮಾಜಿಕ ಮತ್ತು ಸಂವಿಧಾನಾತ್ಮಕ ಆಯಾಮಗಳಲ್ಲಿ ವಿಶ್ಲೇಷಿಸುವ ಪ್ರಯತ್ನವನ್ನು ಪ್ರಸ್ತುತ ಲೇಖನವು ಸಾದರಪಡಿಸುತ್ತದೆ. "ನಾಗರಿಕ ಸಮಾಜ" ಎಂಬ ಪರಿಕಲ್ಪನೆ ಪಾಶ್ಚಾತ್ಯ ರಾಜಕೀಯ ತತ್ವದಲ್ಲಿ ಹೆಚ್ಚು ಹೆಚ್ಚು ರಾಜ್ಯ ಮತ್ತು ಮಾರುಕಟ್ಟೆಯ ನಡುವಿನ ಸ್ವಾಯತ್ತ ಸಾಮಾಜಿಕ ವಲಯವನ್ನು ಸೂಚಿಸಿದರೂ, ಅಂಬೇಡ್ಕರ್ ಅವರ ಚಿಂತನೆಗಳಲ್ಲಿ ಅದು ವಿಶಿಷ್ಟ ಭಾರತೀಯ ಸನ್ನಿವೇಶದಲ್ಲಿ ಮರುಪರಿಗಣನೆಯಾಗುತ್ತದೆ. ಈ ನೆಲೆ ಮತ್ತು ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನವು ಜಾತಿರಹಿತತೆ, ಸಮಾನತಾಪರತೆ, ಸಂವಿಧಾನಾತ್ಮಕ ನೈತಿಕತೆ ಮತ್ತು ನೈತಿಕ ಪ್ರಜಾಸತ್ತಾತ್ಮಕತೆ ಎಂಬ ನಾಲ್ಕು ತಾತ್ವಿಕ ಅಕ್ಷಗಳ ಆಧಾರದಲ್ಲಿ ಅಂಬೇಡ್ಕರ್ ಅವರ ನಾಗರಿಕ ಸಮಾಜದ ಕಲ್ಪನೆಯನ್ನು ವಿಶ್ಲೇಷಿಸಲಾಗಿದೆ. ಅಂಬೇಡ್ಕರ್ ಅವರ ಪ್ರಕಾರ ಜಾತಿ ವ್ಯವಸ್ಥೆ ಸಮಾಜದ ಒಳಹೊರಗಿನ ಸಂವಹನವನ್ನು ಕಡಿತಗೊಳಿಸಿ, ಭ್ರಾತೃತ್ವದ ಮೂಲತತ್ವವನ್ನೇ ಹಾಳುಮಾಡುತ್ತದೆ. ಶ್ರೇಣೀಕೃತ ಅಸಮಾನತೆ ಎಂಬ ಅಂಬೇಡ್ಕರ್ ಅವರ ವಿಶ್ಲೇಷಣೆಯ ಪ್ರಕಾರ, ಜಾತಿ ವ್ಯವಸ್ಥೆಯು ಕೇವಲ ಸಾಮಾಜಿಕ ವಿಭಾಗವಲ್ಲ; ಅದು ಶ್ರೇಣೀಕೃತ ಅವಮಾನ ಮತ್ತು ಅಧಿಕಾರದ ಸ್ಥಾಪಿತ ಕ್ರಮವಾಗಿರುತ್ತದೆ. ಆದ್ದರಿಂದಲೇ ಜಾತಿನಿರ್ಮೂಲನೆಯೂ ಪ್ರಧಾನವಾಗಿ ನಾಗರಿಕ ಸಮಾಜದ ನಿರ್ಮಾಣಕ್ಕೆ ಪೂರ್ವಶರ್ತವಾಗುತ್ತದೆ. ಈ ಲೇಖನವು ಬಹುಮುಖ್ಯವಾಗಿ ಜಾತಿ ವಿನಾಶ ಹಾಗೂ ಸಂವಿಧಾನ ರಚನಾ ಸಭೆಯ ಭಾಷಣಗಳ ಮೂಲ ಆಧಾರದ ಮೇಲೆ ಅಂಬೇಡ್ಕರ್ ಅವರು ಜಾತಿಯಿಲ್ಲದ ಸಮಾಜವನ್ನು ನಾಗರಿಕ ಸಮೂಹ ಜನಜೀವನದ ಮೂಲವೆಂದು ಪರಿಗಣಿಸಿದ ದೃಷ್ಟಿಯನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸುತ್ತದೆ. ರಾಜಕೀಯ ಪ್ರಜಾಸತ್ತಾತ್ಮಕತೆ ಮತ್ತು ಸಾಮಾಜಿಕ ಪ್ರಜಾಸತ್ತಾತ್ಮಕತೆಯ ನಡುವಿನ ಸಂಬಂಧವನ್ನು ಅಂಬೇಡ್ಕರ್ ಅವರು ವಿಶೇಷವಾಗಿ ಒತ್ತಿಹೇಳಿದರು. "ಒಬ್ಬ ವ್ಯಕ್ತಿ, ಒಂದು ಮತ ಮತ್ತು ಒಂದು ಒಂದೇ ಮೌಲ್ಯವೆಂಬ

---

[1].ಅಧ್ಯಾಪಕರು, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರ ಮೈಸೂರು ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ, ಮೈಸೂರು.

ರಾಜಕೀಯ ಸಮಾನತೆ, ಒಬ್ಬ ವ್ಯಕ್ತಿ, ಒಂದು ಮೌಲ್ಯ ಎಂಬ ಸಾಮಾಜಿಕ ಸಮಾನತೆಯೊಂದಿಗೆ ಸಂಧಾನಗೊಳ್ಳಬೇಕು ಎಂಬುದು ಅಂಬೇಡ್ಕರ್ ಅವರ ಪ್ರಬಲವಾದ ಪ್ರತಿಪಾದನೆ ಮತ್ತು ನಿಲುವುವಾಗಿತ್ತು. ಸಮಾಜದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಗಳ ನಡುವೆ ರಾಜಕೀಯ ಸಮಾನತೆ ಉಳಿಯಲು ಸಾಧ್ಯವಿಲ್ಲ ಎಂಬ ಅಂಬೇಡ್ಕರ್ ಅವರ ಎಚ್ಚರಿಕೆಯೂ ಕೂಡ ನಾಗರಿಕ ಸಮಾಜದ ನೈತಿಕ ಬಲವನ್ನು ಪ್ರತಿಪಾದಿಸುತ್ತದೆ. ಹೀಗಾಗಿ, ಸಮಾನತೆ ಮತ್ತು ಭ್ರಾತೃತ್ವವು ನಾಗರಿಕ ಸಮಾಜದ ಜೀವಾಳವಾಗಿವೆ. ಸಾಂವಿಧಾನಾತ್ಮಕ ಮೌಲ್ಯಗಳ ಕುರಿತಂತೆಯೇ ಅಂಬೇಡ್ಕರ್ ಅವರು ಪ್ರತಿಪಾದಿಸಿದ ಸಾಂವಿಧಾನಿಕ ನೈತಿಕತೆ ಎಂಬ ಪರಿಕಲ್ಪನೆಯೂ ಈ ಅಧ್ಯಯನದ ಪ್ರಮುಖ ಕೇಂದ್ರೀಯ ವಸ್ತುವಿಷಯವಾಗಿದೆ. ಸಂವಿಧಾನವು ಕೇವಲ ಕಾನೂನುಪರ ದಾಖಲೆ ಅಲ್ಲ; ಅದು ಸಾಮಾಜಿಕ ಕ್ರಾಂತಿಯ ಸಾಧನವಾಗಿದೆ. ಸಮಾನತೆ, ಸ್ವಾತಂತ್ರ್ಯ, ನ್ಯಾಯ ಮತ್ತು ಧರ್ಮನಿರಪೇಕ್ಷತೆ ಎಂಬ ಮೌಲ್ಯಗಳು ನಾಗರಿಕ ಸಮಾಜದ ಚಟುವಟಿಕೆಗಳಿಗೆ ಕಾನೂನುಬದ್ಧ ಹಾಗೂ ನೈತಿಕ ಚೌಕಟ್ಟನ್ನು ಒದಗಿಸುತ್ತವೆ. ಈ ಲೇಖನವು ಸಾಂವಿಧಾನಾತ್ಮಕ ಹಕ್ಕುಗಳು ಮತ್ತು ಸಾಮಾಜಿಕ ಚಳವಳಿಗಳ ನಡುವಿನ ಪರಸ್ಪರ ಸಂಬಂಧವನ್ನು ಅನ್ವೇಷಿಸುತ್ತದೆ. ಇದಲ್ಲದೆ, ಅಂಬೇಡ್ಕರ್ ಅವರು ಬೌದ್ಧಧಮ್ಮದ ಮರಳಿರುವುದು ಕೂಡ ನಾಗರಿಕ ಸಮಾಜದ ನೈತಿಕ ಪುನರ್‌ರಚನೆಯ ಭಾಗವಾಗಿ ಈ ಅಧ್ಯಯನವನ್ನು ಮಾಡಲಾಗುತ್ತದೆ. ಪ್ರಜ್ಞಾ, ಶೀಲಾ ಮತ್ತು ಸಮಾಧಿ ಎಂಬ ಧಮ್ಮತತ್ವಗಳು ಮಾನವತಾವಾದಿ ಮತ್ತು ಸಮಾನತಾಧಾರಿತ ಸಮಾಜದ ನಿರ್ಮಾಣಕ್ಕೆ ನೈತಿಕ ಬುನಾದಿಯಾಗುತ್ತವೆ. ಧಮ್ಮವನ್ನು ಸಾಮಾಜಿಕ ನ್ಯಾಯದ ಸಾಧನವಾಗಿ ಮರುಪರಿಗಣಿಸಿದ ಅಂಬೇಡ್ಕರ್ ಅವರ ದೃಷ್ಟಿಕೋನವು ನಾಗರಿಕ ಸಮಾಜದ ಆಂತರಿಕ ನೈತಿಕತೆಯನ್ನು ಹೆಚ್ಚು ಬಲಪಡಿಸುತ್ತದೆ. ಈ ಅಧ್ಯಯನದ ಉದ್ದೇಶವು ಅಂಬೇಡ್ಕರ್ ಅವರ ನಾಗರಿಕ ಸಮಾಜದ ಪರಿಕಲ್ಪನೆಯನ್ನು ಕೇವಲ ಐತಿಹಾಸಿಕ ಅಥವಾ ರಾಜಕೀಯ ಚರ್ಚೆಗೆ ಮಾತ್ರ ಸೀಮಿತಗೊಳಿಸದೆ, ಅದನ್ನು ಸಮಕಾಲೀನ ಭಾರತದಲ್ಲಿ ಮಾನವ ಹಕ್ಕುಗಳು, ಎಲ್ಲಾ ಮಾದರಿ ಜೀವಪರ ಮತ್ತು ಮಾನವಪರ ಹೋರಾಟಗಳು ಹಾಗೂ ಸಾಂವಿಧಾನಾತ್ಮಕ ಮೌಲ್ಯಗಳ ರಕ್ಷಣೆಯ ಸನ್ನಿವೇಶದಲ್ಲಿ ಮರುಪಠಣ ಮಾಡುವುದು. ಈ ಅಧ್ಯಯನವು ತೋರಿಸುವುದೇನೆಂದರೆ, ಅಂಬೇಡ್ಕರ್ ಅವರ ನಾಗರಿಕ ಸಮಾಜದ ಕಲ್ಪನೆ ನೈತಿಕ ಪ್ರಜಾಸತ್ತಾತ್ಮಕತೆ ಮತ್ತು ಸಾಮಾಜಿಕ ನ್ಯಾಯದ ಸಮನ್ವಯ ರೂಪವಾಗಿದೆ; ಅದು ಜಾತಿರಹಿತ, ಸಮಾನತಾಪರ ಮತ್ತು ಸಾಂವಿಧಾನಾತ್ಮಕ ಮೌಲ್ಯಾಧಾರಿತ ಸಮಾಜ ನಿರ್ಮಾಣಕ್ಕೆ ದಾರಿದೀಪವಾಗಿದೆ.

**ಪ್ರಧಾನ ಪದಗಳು:** ನಾಗರಿಕ ಸಮಾಜ, ಜಾತಿನಿರ್ಮೂಲನೆ, ಸಮಾನತೆ, ಸಾಂವಿಧಾನಾತ್ಮಕ ನೈತಿಕತೆ, ನೈತಿಕ ಪ್ರಜಾಸತ್ತಾತ್ಮಕತೆ, ಬೌದ್ಧಧಮ್ಮ, ಸಾಮಾಜಿಕ ನ್ಯಾಯ.

**ಪೀಠಿಕೆ**

ಭಾರತೀಯ ಸಾಮಾಜಿಕ ಮತ್ತು ರಾಜಕೀಯ ಚಿಂತನೆಯ ಇತಿಹಾಸದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಸ್ಥಾನವು ವಿಶಿಷ್ಟವೂ ಅಪ್ರತಿಮವೂ ಆಗಿರುವುದು ಕೇವಲ ಗೌರವ ಸೂಚಕ ಮಾತಲ್ಲ; ಅದು ಭಾರತದ ಜನಸಮಾಜದ ಪುನರ್‌ರಚನೆಯ ಇತಿಹಾಸದಲ್ಲಿ ಅವರು ವಹಿಸಿದ ಬೌದ್ಧಿಕ ಮತ್ತು ನೈತಿಕ ಹಸ್ತಕ್ಷೇಪದ ಸ್ಪಷ್ಟ ಸತ್ಯವಾಗಿದೆ. ಅಂಬೇಡ್ಕರ್ ಅವರು ಕೇವಲ ರಾಜಕೀಯ ನಾಯಕರೆಂದು ಗುರುತಿಸಲ್ಪಡುವ ವ್ಯಕ್ತಿಯಲ್ಲ; ಅವರು ಸಮಾಜದ ಅಂತರಾಳದಲ್ಲಿ ಗೂಢವಾಗಿ ನೆಲಸಿದ್ದ ಅನ್ಯಾಯ, ಅಸಮಾನತೆ ಮತ್ತು ಮಾನವೀಯ ಅವಮಾನಗಳ ಮೂಲಗಳನ್ನು ವಿಶ್ಲೇಷಿಸಿದ ತತ್ವಶಾಸ್ತ್ರಜ್ಞ, ಅರ್ಥಶಾಸ್ತ್ರಜ್ಞ ಮತ್ತು ಸಂವಿಧಾನ ತಜ್ಞರೂ ಆಗಿದ್ದರು. ಅಂಬೇಡ್ಕರ್ ಅವರ ಸಮಷ್ಠಿ ಚಿಂತನೆಗಳು ನಿರ್ದಿಷ್ಟ ವರ್ಗ ಅಥವಾ ಜನಸಮುದಾಯದ ಹಿತಾಸಕ್ತಿಗೆ ಸೀಮಿತವಾಗಿರಲಿಲ್ಲ. ಅವು ಮಾನವ ಗೌರವ ಎಂಬ ಸಾಮಾನ್ಯ ಸಿದ್ಧಾಂತದ ಮೇಲೆ ಆಧಾರಿತವಾಗಿದ್ದವು. ಜಾತಿ ವ್ಯವಸ್ಥೆಯು ಭಾರತೀಯ ಸಮಾಜವನ್ನು "ಶ್ರೇಣೀಕೃತ ಅಸಮಾನತೆ"ಯ ಜಾಲದಲ್ಲಿ ಬಂಧಿಸಿದ್ದ ಸಂದರ್ಭದಲ್ಲಿ ಅಂಬೇಡ್ಕರ್ ಅವರು ಸ್ವಾತಂತ್ರ್ಯತೆ, ಸಮಾನತೆ ಮತ್ತು ಭ್ರಾತೃತ್ವವನ್ನು ಕೇವಲ ರಾಜಕೀಯ ಘೋಷಣೆಗಳಾಗಿ ಅಲ್ಲ, ಸಾಮಾಜಿಕ ಪುನರ್‌ರಚನೆಯ ತ್ರಿವಿಧ ತತ್ವಗಳಾಗಿ ಅಂಬೇಡ್ಕರ್ ಅವರು ಪ್ರಬಲವಾಗಿ ಪ್ರತಿಪಾದಿಸಿದರು. ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ಈ ಮೌಲ್ಯಗಳು ಪರಸ್ಪರ ಅವಿಭಾಜ್ಯ ಸಮಾನತೆಯಿಲ್ಲದೆ ಸ್ವಾತಂತ್ರ್ಯ ಶೋಷಣೆಯ ಸಾಧನವಾಗಬಹುದು; ಭ್ರಾತೃತ್ವವಿಲ್ಲದೆ ಸಮಾನತೆ ಕೇವಲ ಕಾನೂನಾತ್ಮಕ ಘೋಷಣೆಯಾಗಿಯೇ ಉಳಿಯಬಹುದು. ಅಂಬೇಡ್ಕರ್ ಅವರ ಚಿಂತನೆಯ ಮೂಲಭೂತ ತತ್ವವೆಂದರೆ; "ಸಾಮಾಜಿಕ ಜನತಂತ್ರ"ವಾಗಿದೆ. ಅಂಬೇಡ್ಕರ್ ಅವರು ರಾಜಕೀಯ ಜನತಂತ್ರವನ್ನು ಮಾತ್ರ ಸಮರ್ಪಕವೆಂದು ಪರಿಗಣಿಸಲಿಲ್ಲ; ಅದು ಸಮಾಜದ ಆಂತರಿಕ ಸಂಬಂಧಗಳಲ್ಲಿ ಪ್ರತಿಫಲಿಸಬೇಕೆಂದು ಒತ್ತಿ ಹೇಳಿದರು. ಈ ಹಿನ್ನೆಲೆಯಲ್ಲಿ ಅಂಬೇಡ್ಕರ್ ಅವರು ಸಾಂವಿಧಾನಾತ್ಮಕ ನೈತಿಕತೆಯ ಪರಿಕಲ್ಪನೆಯನ್ನು ಪ್ರಸ್ತಾಪಿಸಿದರು. ಅಂಬೇಡ್ಕರ್ ಅವರ ಅಭಿಪ್ರಾಯದಲ್ಲಿ ಸಂವಿಧಾನವು ಕೇವಲ ಆಡಳಿತದ ರಚನಾ ಪತ್ರವಲ್ಲ; ಅದು ಸಾಮಾಜಿಕ ಕ್ರಾಂತಿಯ ಸಾಧನವಾಗಿದೆ. ಜಾತಿ ವ್ಯವಸ್ಥೆಯ ವಿಮರ್ಶೆಯಲ್ಲಿ ಅಂಬೇಡ್ಕರ್ ಅವರ ಸ್ಥಾನವು ಮೂಲಭೂತವಾಗಿದ್ದು, ಅಂಬೇಡ್ಕರ್ ಅವರು ಜಾತಿಯನ್ನು ಕೇವಲ ಸಾಮಾಜಿಕ ಆಚರಣೆ ಎಂದು ನೋಡಲಿಲ್ಲ; ಅದು ಮಾನವೀಯ ಸ್ವಾತಂತ್ರ್ಯ ಮತ್ತು ಬೌದ್ಧಿಕ ಬೆಳವಣಿಗೆಗೆ ಅಡ್ಡಿಯಾಗುವ ರಚನಾತ್ಮಕ ವ್ಯವಸ್ಥೆಯೆಂದು ಅಂಬೇಡ್ಕರ್ ಅವರು ವಿಶ್ಲೇಷಿಸಿದರು. ಆದ್ದರಿಂದ, ಜಾತಿ ನಿರ್ಮೂಲನೆ ಅಂಬೇಡ್ಕರ್ ಅವರ ಚಿಂತನೆಯ ಕೇಂದ್ರಭೂತ ಗುರಿಯಾಯಿತು. ಈ ದೃಷ್ಟಿಯಿಂದ ಅಂಬೇಡ್ಕರ್ ಅವರ ಬರಹಗಳು ಮತ್ತು ರಾಜಕೀಯ ಹೋರಾಟಗಳು ಭಾರತೀಯ ಸಮಾಜದ ಮೌಲ್ಯಾಧಾರಗಳನ್ನು ಮರುಪರಿಶೀಲಿಸಲು ಪ್ರೇರಣೆ ನೀಡಿದವು. ಅಂಬೇಡ್ಕರ್ ಅವರ ಸ್ಥಾನವನ್ನು

ಭಾರತೀಯ ತಳಸ್ಪರ್ಶಿ ಚಿಂತನೆಯ ಇತಿಹಾಸದಲ್ಲಿ ಅರ್ಥಮಾಡಿಕೊಳ್ಳುವುದಾದರೆ, ಅದು ಕೇವಲ ಒಂದು ನಾಯಕನ ಸ್ಮರಣೆ ಅಲ್ಲ; ಅದು ಮಾನವ ಗೌರವದ ಪರವಾಗಿ ನಿಂತ ಬೌದ್ಧಿಕ ಕ್ರಾಂತಿಯ ಸ್ಮರಣೆ. ಅವರ ಚಿಂತನೆಗಳು ಇಂದಿಗೂ ಸಾಮಾಜಿಕ ನ್ಯಾಯ, ಸಮಾನತೆ ಮತ್ತು ಪ್ರಜಾಸತ್ತಾತ್ಮಕ ಮೌಲ್ಯಗಳ ಚರ್ಚೆಯಲ್ಲಿ ಜೀವಂತವಾಗಿವೆ.

ಸ್ವಾತಂತ್ರ್ಯತೆ ಎಂಬುದು ಅಂಬೇಡ್ಕರ್ ಅವರ ಮೂಲ ಚಿಂತನೆಗಳಲ್ಲಿ ವೈಯಕ್ತಿಕ ಗೌರವ ಮತ್ತು ಆತ್ಮಗೌರವದ ಅಭಿವ್ಯಕ್ತಿಯಾಗಿರುತ್ತದೆ. ಸ್ವಾತಂತ್ರ್ಯವು ಕೇವಲ ಮಾತಿನ ಸ್ವಾತಂತ್ರ್ಯವಲ್ಲ; ಅದು ಧರ್ಮ, ವೃತ್ತಿ, ಶಿಕ್ಷಣ ಮತ್ತು ಚಿಂತನೆಯ ಸ್ವಾಯತ್ತತೆಯನ್ನೂ ಒಳಗೊಂಡಿರುತ್ತದೆ. ಜಾತಿ ವ್ಯವಸ್ಥೆಯು ಒಬ್ಬ ವ್ಯಕ್ತಿಯ ಆಯ್ಕೆಯ ಸ್ವಾತಂತ್ರ್ಯವನ್ನು ಕುಂಠಿತಗೊಳಿಸುತ್ತದೆ ಎಂದು ಅಂಬೇಡ್ಕರ್ ಅವರು ವಿಶ್ಲೇಷಿಸಿದರು. ಆದ್ದರಿಂದಲೇ ಸ್ವಾತಂತ್ರ್ಯವು ನಾಗರಿಕ ಸಮಾಜದಲ್ಲಿ ವ್ಯಕ್ತಿಯ ಸಕ್ರಿಯ ಪಾಲ್ಗೊಳ್ಳುವಿಕೆಗೆ ಅಗತ್ಯವಾದ ಅಂಶವಾಗಿದೆ. ಸಮಾನತೆಯು ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ಕೇವಲ ಕಾನೂನುಪರ ಸಮಾನತೆಯಲ್ಲ. ಅದು ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿಯೂ ಪ್ರತಿಫಲಿಸಬೇಕಾದ ಸಮಗ್ರ ಮೌಲ್ಯವಾಗಿರುತ್ತದೆ. **"ಒಬ್ಬ ವ್ಯಕ್ತಿ, ಒಂದು ಮತ ಮತ್ತು ಒಂದು ಮೌಲ್ಯ"** ಎಂಬ ರಾಜಕೀಯ ಸಮಾನತೆಯಾಗಿದೆ. ಆದರೆ, **"ಒಬ್ಬ ವ್ಯಕ್ತಿ, ಒಂದು ಮೌಲ್ಯ"** ಎಂಬ ಸಾಮಾಜಿಕ ಸಮಾನತೆಯೊಂದಿಗೆ ಸಂಧಾನಗೊಳ್ಳಬೇಕು ಎಂಬುದು ಅಂಬೇಡ್ಕರ್ ಅವರ ಪ್ರಬಲ ಪ್ರತಿಪಾದನೆ ಮತ್ತು ನಿಲುವುವಾಗಿತ್ತು. ಸಾಮಾಜಿಕ ಶ್ರೇಣೀಕರಣ ಉಳಿದಿರುವವರೆಗೆ ಪ್ರಜಾಸತ್ತಾತ್ಮಕ ವ್ಯವಸ್ಥೆ ಜೀವಂತವಾಗಲಾರದು ಎಂದು ಅಂಬೇಡ್ಕರ್ ಅವರು ಎಚ್ಚರಿಸಿದರು. ಸ್ವಾತಂತ್ರ್ಯತೆ ಎಂಬುದು ಅಂಬೇಡ್ಕರ್ ಅವರ ಮೂಲ ಚಿಂತನೆಗಳಲ್ಲಿ ವೈಯಕ್ತಿಕ ಗೌರವ ಮತ್ತು ಆತ್ಮಗೌರವದ ಅಭಿವ್ಯಕ್ತಿಯಾಗಿರುತ್ತದೆ. ಸ್ವಾತಂತ್ರ್ಯವು ಕೇವಲ ಮಾತಿನ ಸ್ವಾತಂತ್ರ್ಯವಲ್ಲ; ಅದು ಧರ್ಮ, ವೃತ್ತಿ, ಶಿಕ್ಷಣ ಮತ್ತು ಚಿಂತನೆಯ ಸ್ವಾಯತ್ತತೆಯನ್ನೂ ಒಳಗೊಂಡಿರುತ್ತದೆ. ಜಾತಿ ವ್ಯವಸ್ಥೆಯು ಒಬ್ಬ ವ್ಯಕ್ತಿಯ ಆಯ್ಕೆಯ ಸ್ವಾತಂತ್ರ್ಯವನ್ನು ಕುಂಠಿತಗೊಳಿಸುತ್ತದೆ ಎಂದು ಅಂಬೇಡ್ಕರ್ ಅವರು ವಿಶ್ಲೇಷಿಸಿದರು. ಆದ್ದರಿಂದಲೇ ಸ್ವಾತಂತ್ರ್ಯವು ನಾಗರಿಕ ಸಮಾಜದಲ್ಲಿ ಒಬ್ಬ ವ್ಯಕ್ತಿಯ ಸಕ್ರಿಯ ಪಾಲ್ಗೊಳ್ಳುವಿಕೆಗೆ ಅಗತ್ಯವಾದ ಅಂಶವಾಗಿದೆ. ಭ್ರಾತೃತ್ವ ಅಥವಾ ಸೋದರತೆ ಎಂಬುದು ಅವರ ಚಿಂತನೆಗಳಲ್ಲಿ ಅತ್ಯಂತ ಮಹತ್ವದ್ದಾಗಿದೆ. ಸ್ವಾತಂತ್ರ್ಯತೆ ಮತ್ತು ಸಮಾನತೆಗೆ ಒಂದು ನೈತಿಕ ಮೂಲ ನೆಲೆಯನ್ನು ಒದಗಿಸುವ ಮೌಲ್ಯವೇ ಭ್ರಾತೃತ್ವವಾಗಿರುತ್ತದೆ. ಇದು ಪರಸ್ಪರ ಗೌರವ, ಮಾನವೀಯ ಸಹಾನುಭೂತಿ ಮತ್ತು ಸಾಮಾಜಿಕ ಐಕ್ಯತೆ ಇಲ್ಲದೆ ನಾಗರಿಕ ಸಮಾಜ ಸ್ಥಿರವಾಗುವುದಿಲ್ಲ. ಭಾರತೀಯ ಸಂದರ್ಭದಲ್ಲಿ ಅವೈಜ್ಞಾನಿಕ ಸೃಷ್ಟಿಯ ಜಾತಿ ವ್ಯವಸ್ಥೆಯೂ ಈ ಭ್ರಾತೃತ್ವದ ಆತ್ಮವನ್ನೇ ನಾಶಮಾಡುತ್ತದೆ ಎಂದು ಭ್ರಾತೃತ್ವ ಅಥವಾ ಸೋದರತೆ ಎಂಬುದು ಅವರು ಅಭಿಪ್ರಾಯಪಟ್ಟರು. ಈ ತ್ರಿಮೂರ್ತ ಮೌಲ್ಯಗಳ ಸಂಯೋಜನೆ ಭ್ರಾತೃತ್ವ ಅಥವಾ ಸೋದರತೆ ಎಂಬುದು ಅಂಬೇಡ್ಕರ್ ಅವರ ನಾಗರಿಕ

ಸಮಾಜದ ಪರಿಕಲ್ಪನೆಯ ಮೂಲಾಧಾರವಾಗಿದೆ. ನಾಗರಿಕ ಸಮಾಜವು ಕೇವಲ ಸಂಘಟನೆಗಳ ವಲಯವಲ್ಲ; ಅದು ಮಾನವೀಯ ಗೌರವವನ್ನು ಕೇಂದ್ರದಲ್ಲಿ ಇಟ್ಟುಕೊಂಡಿರುವ ಜನಸಮೂಹದ ಜೀವನ ವ್ಯವಸ್ಥೆಯಾಗಿರುತ್ತದೆ. ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ರಾಜಕೀಯ ಪ್ರಜಾಸತ್ತಾತ್ಮಕತೆಯು ಸಾಮಾಜಿಕ ಪ್ರಜಾಸತ್ತಾತ್ಮಕತೆಯೊಂದಿಗೆ ಸಮನ್ವಯಗೊಳ್ಳಬೇಕು. ಇಲ್ಲದಿದ್ದರೆ ಅದು ಶೂನ್ಯ ರೂಪಕವಾಗಿ ಉಳಿಯುತ್ತದೆ. ಅಂಬೇಡ್ಕರ್ ಅವರ ಈ ಮೌಲ್ಯಾಧಾರಿತ ಚಿಂತನೆಯೂ ಭಾರತ ಸಂವಿಧಾನದಲ್ಲಿ ಪ್ರತಿಫಲಿಸಿರುತ್ತದೆ. ಸಮಾನತೆ, ಸ್ವಾತಂತ್ರ್ಯ, ನ್ಯಾಯ ಮತ್ತು ಧರ್ಮನಿರಪೇಕ್ಷತೆ ಎಂಬ ತತ್ವಗಳು ಸಂವಿಧಾನದ ಮೂಲಕ ಕಾನೂನುಬದ್ಧ ಸ್ವರೂಪ ಪಡೆದವು. ಹೀಗಾಗಿ, ಭ್ರಾತೃತ್ವ ಅಥವಾ ಸೋದರತೆ ಎಂಬುದು ಅವರ ನಾಗರಿಕ ಸಮಾಜದ ಪರಿಕಲ್ಪನೆಯೂ ಕೇವಲ ತಾತ್ವಿಕ ಅಭಿಪ್ರಾಯವಲ್ಲ; ಅದು ಸಾಮಾಜಿಕ ಕ್ರಾಂತಿಯ ದಿಕ್ಕು ತೋರಿಸುವ ಪ್ರಾಯೋಗಿಕ ಕಾರ್ಯಕ್ರಮವೂ ಆಗಿದೆ. ಅಂಬೇಡ್ಕರ್ ಅವರ ಸ್ಥಾನ ವಿಶಿಷ್ಟವಾಗಿದೆ ಎಂಬುದರ ಅರ್ಥವೂ, ಅವರು ಭಾರತೀಯ ಸಮಾಜದ ನೈತಿಕ ಪುನರ್‌ರಚನೆಗೆ ಅಗತ್ಯವಾದ ಮೌಲ್ಯಾಧಾರಿತ ಚಿಂತನೆಗಳನ್ನು ನೀಡಿದರು. ಸ್ವಾತಂತ್ರ್ಯತೆ, ಸಮಾನತೆ, ಮತ್ತು ಭ್ರಾತೃತ್ವ ಎಂಬ ತ್ರಿಮೂರ್ತ ಮೌಲ್ಯಗಳ ಮೂಲಕ ಭ್ರಾತೃತ್ವ ಅಥವಾ ಸೋದರತೆ ಎಂಬುದು ಅವರು ಜಾತಿರಹಿತ, ನ್ಯಾಯಾಧಾರಿತ ಮತ್ತು ನೈತಿಕ ಪ್ರಜಾಸತ್ತಾತ್ಮಕ ನಾಗರಿಕ ಸಮಾಜದ ದೃಷ್ಟಿಯನ್ನು ಪ್ರಬಲವಾಗಿಯೇ ಪ್ರತಿಪಾದಿಸಿದರು.

**ನಾಗರಿಕ ಸಮಾಜದ ಪರಿಕಲ್ಪನೆ**

"ನಾಗರಿಕ ಸಮಾಜ" ಎಂಬ ಪರಿಕಲ್ಪನೆಯು ಪಾಶ್ಚಾತ್ಯ ರಾಜಕೀಯ ತತ್ವದಲ್ಲಿ ಸರ್ವೇಸಾಮಾನ್ಯವಾಗಿ ರಾಜ್ಯ ಮತ್ತು ಮಾರುಕಟ್ಟೆಯ ನಡುವಿನ ಸ್ವಾಯತ್ತ ವಲಯವೆಂದು ಪರಿಗಣಿಸಲಾಗುತ್ತದೆ. ಅಂದರೆ, ಸರ್ಕಾರದ ನೇರ ನಿಯಂತ್ರಣದಿಂದ ಹೊರಗಿರುವ, ಸ್ವಯಂಪ್ರೇರಿತ ಸಂಘಟನೆಗಳು, ಸಂಘಗಳು, ಮಾಧ್ಯಮ, ಧಾರ್ಮಿಕ–ಸಾಮಾಜಿಕ ಸಂಸ್ಥೆಗಳು ಮತ್ತು ಚಳವಳಿಗಳ ಸಮೂಹವೇ ನಾಗರಿಕ ಸಮಾಜವಾಗಿರುತ್ತದೆ. ಆದರೆ, ಈ ವ್ಯಾಖ್ಯಾನವು ಸಮಾನತೆಯ ಮೂಲಭೂತ ಅಸ್ತಿತ್ವವಿರುವ ಸಮಾಜವನ್ನು ಪೂರ್ವಧಾರಣೆಯಾಗಿ ಹೊಂದಿದೆ. ಭಾರತೀಯ ಸನ್ನಿವೇಶದಲ್ಲಿ ಪರಿಸ್ಥಿತಿ ಭಿನ್ನವಾಗಿದೆ. ಇಲ್ಲಿ ಸಮಾಜವು ಶತಮಾನಗಳ ಕಾಲಮಾನದಲ್ಲಿ ಈ ಜಾತಿ ವ್ಯವಸ್ಥೆಯಂತಹ ಶ್ರೇಣೀಕೃತ ಸಾಮಾಜಿಕ ರಚನೆಯಿಂದ ನಿಯಂತ್ರಿತವಾಗಿದೆ. ಈ ವ್ಯವಸ್ಥೆಯಲ್ಲಿ ವ್ಯಕ್ತಿಯ ಗುರುತು, ವೃತ್ತಿ, ಸಾಮಾಜಿಕ ಸ್ಥಾನಮಾನ ಮತ್ತು ಸಂಬಂಧಗಳ ವಲಯವು ಜನನದಿಂದಲೇ ನಿರ್ಧಾರವಾಗುತ್ತದೆ. ಹೀಗಾಗಿ, ರಾಜ್ಯದಿಂದ ಹೊರಗಿರುವ ಎಲ್ಲ ಸಂಘಟನೆಗಳೂ ಸ್ವಯಂಪ್ರೇರಿತ ಮತ್ತು ಸಮಾನತಾಪರವೆಂದು ಊಹಿಸುವುದು ಸರಳೀಕರಣವಾಗುತ್ತದೆ. ಜಾತಿ ವ್ಯವಸ್ಥೆ ಸ್ವತಃ ನಾಗರಿಕ ಸಮಾಜದ ಒಳಗಿರುವ ಒಂದು ಶಕ್ತಿಸಂರಚನೆಯಾಗಿ ಕಾರ್ಯನಿರ್ವಹಿಸುತ್ತದೆ. ಇದನ್ನೇ ಅಂಬೇಡ್ಕರ್ ಅವರು ಆಳವಾಗಿ ವಿಶ್ಲೇಷಿಸಿದರು.

ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ಜಾತಿಯು ಕೇವಲ ಧಾರ್ಮಿಕ ಅಥವಾ ಸಾಮಾಜಿಕ ಆಚರಣೆಗಳ ವಿಷಯವಲ್ಲ; ಅದು ವ್ಯಕ್ತಿಯ ಸ್ವಾತಂತ್ರ್ಯ ಮತ್ತು ಭ್ರಾತೃತ್ವವನ್ನು ಹಾಳುಮಾಡುವ ಸಂಘಟಿತ ವ್ಯವಸ್ಥೆಯಾಗಿದೆ. ಜಾತಿ ವ್ಯವಸ್ಥೆಯ ಅಡಿಯಲ್ಲಿ ರೂಪುಗೊಳ್ಳುವ ಸಂಘಟನೆಗಳು ಸಹ ಸಮಾನತೆಯ ಆಧಾರದಲ್ಲಿ ಕಾರ್ಯನಿರ್ವಹಿಸುವುದಿಲ್ಲ. ಆದ್ದರಿಂದಲೇ ಕೇವಲ ರಾಜ್ಯದಿಂದ ಸ್ವಾಯತ್ತವಾಗಿರುವುದರಿಂದ ಮಾತ್ರ ಒಂದು ವಲಯವನ್ನು ನಾಗರಿಕ ಸಮಾಜವೆಂದು ಕರೆಯಲು ಸಾಧ್ಯವಿಲ್ಲ.

ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ನಿಜವಾದ ನಾಗರಿಕ ಸಮಾಜವು ಈ ಕೆಳಗಿನ ಮೂರು ಮೂಲಭೂತ ಅಂಶಗಳ ಮೇಲೆ ನಿರ್ಮಿತವಾಗಿರಬೇಕು. ಅವುಗಳೆಂದರೆ;

- ಮೊದಲನೆಯದು; ಜಾತಿರಹಿತತೆ
- ಎರಡನೆಯದು; ಸಮಾನತಾಪರತೆ ಮತ್ತು
- ಮೂರನೆಯದು; ನೈತಿಕ ಪ್ರಜಾಸತ್ತಾತ್ಮಕತೆ

**ಜಾತಿರಹಿತತೆ:** ನಾಗರಿಕ ಸಮಾಜದಲ್ಲಿ ವ್ಯಕ್ತಿಯ ಗುರುತು ಜನನಾಧಾರಿತ ಶ್ರೇಣೀಕರಣದಿಂದ ನಿರ್ಧಾರವಾಗಬಾರದು. ಜಾತಿಯಿಲ್ಲದ ಸಮಾಜದಲ್ಲೇ ಪರಸ್ಪರ ಗೌರವ ಮತ್ತು ಮಾನವೀಯ ಸಂಬಂಧಗಳು ಬೆಳೆಯುತ್ತವೆ. ಜಾತಿ ನಿರ್ಮೂಲನೆಯಿಲ್ಲದೆ ನಾಗರಿಕ ಚೇತನ ಬೆಳೆಯಲಾರದು ಎಂಬುದು ಅಂಬೇಡ್ಕರ್ ಅವರ ದೃಢ ನಿಲುವು.

**ಸಮಾನತಾಪರತೆ:** ಸಾಮಾಜಿಕ ಮತ್ತು ಆರ್ಥಿಕ ಸಮಾನತೆ ಇಲ್ಲದೆ ನಾಗರಿಕ ಸಮಾಜ ಕೇವಲ ರೂಪಕವಾಗುತ್ತದೆ. ಅಂಬೇಡ್ಕರ್ ಅವರ ಪ್ರಕಾರ **"ಒಬ್ಬ ವ್ಯಕ್ತಿ, ಒಂದು ಮತ ಮತ್ತು ಒಂದು ಮೌಲ್ಯ"** ಎಂಬ ರಾಜಕೀಯ ಸಮಾನತೆಯಾಗಿರುತ್ತದೆ. ಆದರೆ, **"ಒಬ್ಬ ವ್ಯಕ್ತಿ, ಒಂದು ಮೌಲ್ಯ"** ಎಂಬ ಸಾಮಾಜಿಕ ಸಮಾನತೆಯೊಂದಿಗೆ ಸಂಧಾನಗೊಳ್ಳಬೇಕು. ಇಲ್ಲದಿದ್ದರೆ ನಾಗರಿಕ ಸಮಾಜವು ಶಕ್ತಿಶಾಲಿಗಳ ಪ್ರಭುತ್ವದ ವೇದಿಕೆಯಾಗಿ ಮಾತ್ರ ಉಳಿಯುತ್ತದೆ.

**ನೈತಿಕ ಪ್ರಜಾಸತ್ತಾತ್ಮಕತೆ:** ಪ್ರಜಾಸತ್ತಾತ್ಮಕತೆಯು ಕೇವಲ ಚುನಾವಣಾ ವ್ಯವಸ್ಥೆಯಲ್ಲ; ಅದು ಪರಸ್ಪರ ಗೌರವ, ಸಹಿಷ್ಣುತೆ ಮತ್ತು ಕಾನೂನು ಪ್ರಾಮುಖ್ಯತೆಯ ಜನಜೀವನದ ಒಂದು ಪದ್ಧತಿಯಾಗಿರುತ್ತದೆ. ನಾಗರಿಕ ಸಮಾಜವು ಈ ನೈತಿಕ ಮೌಲ್ಯಗಳನ್ನು ಅಳವಡಿಸಿಕೊಂಡಿರಬೇಕು.

ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ನಾಗರಿಕ ಸಮಾಜವು ಕೇವಲ ಸಂಘಟನೆಗಳ ಸಮೂಹವಲ್ಲ; ಅದು ಮಾನವೀಯ ಗೌರವವನ್ನು ಕೇಂದ್ರದಲ್ಲಿ ಇಟ್ಟುಕೊಂಡಿರುವ ಸಮೂಹವು ಜನಜೀವನ ವ್ಯವಸ್ಥೆಯಾಗಬೇಕು. ರಾಜ್ಯದಿಂದ ಸ್ವಾಯತ್ತತೆಯಷ್ಟೇ ಸಾಕಾಗುವುದಿಲ್ಲ; ಸಮಾನತೆ ಮತ್ತು ಭ್ರಾತೃತ್ವದ ನೈತಿಕ ನೆಲೆ ಅಗತ್ಯವಾಗಿರುತ್ತದೆ. ಈ ವ್ಯಾಖ್ಯಾನವು ಭಾರತೀಯ ಸಮಾಜದ ವಿಶೇಷ ಸನ್ನಿವೇಶವನ್ನು ಗಮನದಲ್ಲಿ ಇಟ್ಟುಕೊಂಡು ನಾಗರಿಕ ಸಮಾಜದ ಪರಿಕಲ್ಪನೆಯನ್ನು ಮರುಪರಿಗಣಿಸುವ

ಪ್ರಯತ್ನವಾಗಿರುತ್ತದೆ. ಅಂಬೇಡ್ಕರ್ ಅವರ ಚಿಂತನೆಗಳು ಈ ಮರುಪರಿಗಣನೆಗೆ ಬಲವಾದ ತಾತ್ವಿಕ ನೆಲೆಯನ್ನು ಒದಗಿಸುತ್ತವೆ.

ಅಂಬೇಡ್ಕರ್ ಅವರು ತಮ್ಮ ಪ್ರಸಿದ್ಧ ಕೃತಿ ಜಾತಿ ವಿನಾಶದ ಮೂಲಕ ಜಾತಿ ವ್ಯವಸ್ಥೆಯ ತಾತ್ವಿಕ ಹಾಗೂ ಸಾಮಾಜಿಕ ವಿಮರ್ಶೆಯನ್ನು ಅತ್ಯಂತ ತೀಕ್ಷ್ಣವಾಗಿ ಮಂಡಿಸಿದರು. ಈ ಕೃತಿಯಲ್ಲಿ ಅಂಬೇಡ್ಕರ್ ಅವರು ಜಾತಿಯನ್ನು ಕೇವಲ ಧಾರ್ಮಿಕ ಆಚರಣೆ ಅಥವಾ ಸಾಮಾಜಿಕ ಸಂಪ್ರದಾಯವೆಂದು ನೋಡದೆ, ಅದು ಮಾನವೀಯ ಸಂಬಂಧಗಳನ್ನು ವಿಭಜಿಸುವ ಮತ್ತು ಭ್ರಾತೃತ್ವದ ಆತ್ಮವನ್ನೇ ಹಾಳುಮಾಡುವ ಸಂಘಟಿತ ವ್ಯವಸ್ಥೆಯೆಂದು ವಿಶ್ಲೇಷಿಸಿದರು. ಅಂಬೇಡ್ಕರ್ ಅವರ ಅಭಿಪ್ರಾಯದಲ್ಲಿ, ಜಾತಿ ವ್ಯವಸ್ಥೆಯ ಮೂಲಭೂತ ಸ್ವಭಾವವೇ ಶ್ರೇಣೀಕೃತ ಅಸಮಾನತೆಯಾಗಿರುತ್ತದೆ. ಅಂದರೆ ಈ ಶ್ರೇಣೀಕೃತ ಅಸಮಾನತೆಯ ವ್ಯವಸ್ಥೆಯಲ್ಲಿ ಪ್ರತಿಯೊಂದು ಜಾತಿಯು ತನ್ನಿಗಿಂತ ಕೆಳಗಿನ ಜಾತಿಯನ್ನು ತಿರಸ್ಕರಿಸುವ ಮನೋಭಾವವನ್ನು ಬೆಳೆಸಿಕೊಳ್ಳುತ್ತದೆ. ಇದರ ಕಾರಣ ಮತ್ತು ಪರಿಣಾಮವಾಗಿ, ಸಮಾಜದಲ್ಲಿ ಸಮಾನ ಗೌರವದ ಬದಲು ಕ್ರಮಬದ್ಧ ಅವಮಾನ ಸ್ಥಾಪಿತವಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಪರಸ್ಪರ ವಿಶ್ವಾಸ, ಸಹಕಾರ ಮತ್ತು ಮಾನವೀಯ ಐಕ್ಯತೆ ಬೆಳೆಯುವುದಿಲ್ಲ. ಭ್ರಾತೃತ್ವ ಎಂಬುದು ಅಂಬೇಡ್ಕರ್ ಅವರ ತ್ರಿಮೂರ್ತವಾದಿತ್ವ ತತ್ವದ ಮೌಲ್ಯಗಳಲ್ಲಿ ಅತ್ಯಂತ ಮಹತ್ವದ್ದಾಗಿರುತ್ತದೆ. ಅಂಬೇಡ್ಕರ್ ಅವರ ಪ್ರಕಾರ, ಸಮಾನತೆ ಮತ್ತು ಸ್ವಾತಂತ್ರ್ಯಕ್ಕೆ ನೈತಿಕ ಬುನಾದಿ ಒದಗಿಸುವುದು ಇದೇ ಭ್ರಾತೃತ್ವವಾಗಿದೆ. ಆದರೆ ಜಾತಿ ವ್ಯವಸ್ಥೆಯಲ್ಲಿ ವ್ಯಕ್ತಿಯ ಗುರುತು ಮಾನವೀಯತೆಯ ಆಧಾರದಲ್ಲಿ ನಿರ್ಧಾರವಾಗದೆ, ಜನನ ಮತ್ತು ಶ್ರೇಣೀಕರಣದ ಆಧಾರದ ಮೇಲೆ ನಿರ್ಧಾರವಾಗುತ್ತದೆ. ಹೀಗಾಗಿ, ಜಾತಿ ವ್ಯವಸ್ಥೆ ಮಾನವೀಯ ಸಂಬಂಧಗಳನ್ನು ಕೃತಕ ಗೋಡೆಗಳ ಮೂಲಕ ವಿಭಜಿಸುತ್ತದೆ. ಈ ಕಾರಣದಿಂದಲೇ ಅಂಬೇಡ್ಕರ್ ಅವರು ಜಾತಿ ನಿರ್ಮೂಲನೆಯನ್ನೇ ನಿಜವಾದ ನಾಗರಿಕ ಸಮಾಜ ನಿರ್ಮಾಣದ ಮೊದಲ ಹೆಜ್ಜೆಯೆಂದು ಪರಿಗಣಿಸಿದರು. ಜಾತಿಯಿಲ್ಲದ ಸಮಾಜದಲ್ಲೇ ವ್ಯಕ್ತಿಗಳು ಪರಸ್ಪರ ಸಮಾನ ಗೌರವದೊಂದಿಗೆ ಬದುಕಲು ಸಾಧ್ಯ. ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ನಾಗರಿಕ ಸಮಾಜವು ಕೇವಲ ರಾಜ್ಯದಿಂದ ಸ್ವಾಯತ್ತವಾಗಿರುವ ವಲಯವಲ್ಲ; ಅದು ಮಾನವೀಯ ಗೌರವ ಮತ್ತು ಸಮಾನತೆಯ ಮೇಲೆ ನಿಂತಿರುವ ಸಮೂಹಜೀವನ ವ್ಯವಸ್ಥೆ. ಇದೇ ಸಂದರ್ಭದಲ್ಲಿ ಅಂಬೇಡ್ಕರ್ ಅವರು ರಾಜಕೀಯ ಪ್ರಜಾಸತ್ತಾತ್ಮಕತೆಯ ಮಿತಿಗಳನ್ನು ಎಚ್ಚರಿಸಿದರು. "ಒಬ್ಬ ವ್ಯಕ್ತಿ, ಒಂದು ಮತ ಮತ್ತು ಒಂದೇ ಮೌಲ್ಯ" ಎಂಬ ರಾಜಕೀಯ ಸಮಾನತೆಯೂ ಇದ್ದರೂ ಕೂಡ ಜನಸಮಾಜದಲ್ಲಿ ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆಗಳು ಮುಂದುವರಿದರೆ, ಪ್ರಜಾಸತ್ತಾತ್ಮಕತೆ ಕೇವಲ ರೂಪಕವಾಗುತ್ತದೆ. 1949ರಲ್ಲಿ ಸಂವಿಧಾನ ರಚನಾ ಸಭೆಯ ಭಾಷಣದಲ್ಲಿ ಅಂಬೇಡ್ಕರ್ ಅವರು ಹೇಳಿದಂತೆ; ರಾಜಕೀಯ ಸಮಾನತೆ ಮತ್ತು ಸಾಮಾಜಿಕ ಅಸಮಾನತೆಗಳ ನಡುವಿನ ವಿರೋಧಾಭಾಸ ದೀರ್ಘಕಾಲ ಉಳಿಯುವುದಿಲ್ಲ. ಅಂಬೇಡ್ಕರ್ ಅವರ ನಿಲುವು ಸ್ಪಷ್ಟವಾಗಿತ್ತು. ಏಕೆಂದರೆ,

ರಾಜಕೀಯ ಪ್ರಜಾಸತ್ತಾತ್ಮಕತೆ ಸಾಮಾಜಿಕ ಮತ್ತು ಆರ್ಥಿಕ ಪ್ರಜಾಸತ್ತಾತ್ಮಕತೆಯೊಂದಿಗೆ ಸಂಧಾನಗೊಳ್ಳಬೇಕು. ಇಲ್ಲದಿದ್ದರೆ, ಪ್ರಜಾಪ್ರಭುತ್ವದ ಸಂಸ್ಥೆಗಳು ದುರ್ಬಲಗೊಳ್ಳುತ್ತವೆ. ಹೀಗಾಗಿ, ಜಾತಿ ವಿನಾಶ ಎಂಬ ಕೃತಿಯೂ ಕೇವಲ ಜಾತಿ ವ್ಯವಸ್ಥೆಯ ವಿರುದ್ಧದ ಘೋಷಣೆ ಮಾತ್ರವಲ್ಲ; ಅದು ಸಮಾನತೆ, ಭ್ರಾತೃತ್ವ ಮತ್ತು ನೈತಿಕ ಪ್ರಜಾಸತ್ತಾತ್ಮಕತೆಯ ಮೇಲೆ ಆಧಾರಿತ ನಾಗರಿಕ ಸಮಾಜ ನಿರ್ಮಾಣದ ಘೋಷಣಾ ಪತ್ರವಾಗಿರುತ್ತದೆ.

ಸಂವಿಧಾನ ರಚನಾ ಸಭೆಯ ಸದಸ್ಯರಾಗಿ ಮತ್ತು ಕರಡು ರಚನಾ ಸಮಿತಿಯ ಅಧ್ಯಕ್ಷರಾಗಿ ಅಂಬೇಡ್ಕರ್ ಅವರು ಪ್ರತಿಪಾದಿಸಿದ ಸಾಂವಿಧಾನಾತ್ಮಕ ನೈತಿಕತೆ ಎಂಬ ಪರಿಕಲ್ಪನೆಯೂ ನಾಗರಿಕ ಸಮಾಜದ ನೈತಿಕ ಚೌಕಟ್ಟನ್ನು ರೂಪಿಸುತ್ತದೆ. ಸಂವಿಧಾನವು ಕೇವಲ ಆಡಳಿತದ ಸಾಧನವಲ್ಲ; ಅದು ಸಾಮಾಜಿಕ ಕ್ರಾಂತಿಯ ಸಾಧನವಾಗಿದೆ. ಸಮಾನತೆ, ಸ್ವಾತಂತ್ರ್ಯ, ನ್ಯಾಯ ಮತ್ತು ಧರ್ಮನಿರಪೇಕ್ಷತೆ ಎಂಬ ಮಾನವಪರ ಮತ್ತು ಜೀವಪರ ಮೌಲ್ಯಗಳು ನಾಗರಿಕ ಸಮಾಜದ ಕಾರ್ಯಚಟುವಟಿಕೆಗಳಿಗೆ ದಿಕ್ಕು ತೋರಿಸುತ್ತವೆ. ಅಂಬೇಡ್ಕರ್ ಅವರ ನಾಗರಿಕ ಸಮಾಜದ ಪರಿಕಲ್ಪನೆಯನ್ನು ತಾತ್ವಿಕ, ಸಾಮಾಜಿಕ ಮತ್ತು ಸಾಂವಿಧಾನಾತ್ಮಕ ಆಯಾಮಗಳಲ್ಲಿ ವಿಶ್ಲೇಷಿಸುವುದಾಗಿರುತ್ತದೆ. ಜಾತಿರಹಿತತೆ, ಸಮಾನತಾಪರತೆ, ಸಂವಿಧಾನಾತ್ಮಕ ನೈತಿಕತೆ ಮತ್ತು ನೈತಿಕ ಪ್ರಜಾಸತ್ತಾತ್ಮಕತೆ ಎಂಬ ಅಂಶಗಳ ಮೂಲಕ ಅಂಬೇಡ್ಕರ್ ಅವರ ಚಿಂತನೆಗಳನ್ನು ಸಮಗ್ರವಾಗಿ ಅಧ್ಯಯನ ಮಾಡುವುದು ಈ ಗ್ರಂಥದ ಪ್ರಧಾನ ಗುರಿಯಾಗಿದೆ.

ಸಮಕಾಲೀನ ಭಾರತದಲ್ಲಿನ ಮಾನವ ಹಕ್ಕುಗಳು, ಶೋಷಿತ ಜನಸಮುದಾಯಗಳ ಚಳುವಳಿ, ಮಹಿಳಾ ಹಕ್ಕುಗಳ ಹೋರಾಟ ಮತ್ತು ಸಾಂವಿಧಾನಾತ್ಮಕ ಮೌಲ್ಯಗಳ ರಕ್ಷಣೆಯ ಸನ್ನಿವೇಶದಲ್ಲಿ ಅಂಬೇಡ್ಕರ್ ಅವರ ನಾಗರಿಕ ಸಮಾಜದ ಕಲ್ಪನೆ ಅತ್ಯಂತ ಪ್ರಸ್ತುತವಾಗಿದೆ. ಆದ್ದರಿಂದ, ಈ ಅಧ್ಯಯನವು ಅಂಬೇಡ್ಕರ್ ಅವರ ಚಿಂತನೆಗಳನ್ನು ಇತಿಹಾಸದ ಸೀಮಿತ ಪಠ್ಯವಸ್ತುವಾಗಿ ನೋಡದೆ, ಸಮಕಾಲೀನ ಸಾಮಾಜಿಕ ಪರಿವರ್ತನೆಗೆ ದಾರಿದೀಪವಾಗುವ ತಾತ್ವಿಕ ದೃಷ್ಟಿಕೋನವಾಗಿ ಮರುಪರಿಗಣಿಸುತ್ತದೆ. ಭಾರತೀಯ ಸಾಮಾಜಿಕ ಮತ್ತು ರಾಜಕೀಯ ಚಿಂತನಾ ಚರಿತ್ರೆಯಲ್ಲಿ ಅಂಬೇಡ್ಕರ್ ಅವರ ಸ್ಥಾನ ವಿಶಿಷ್ಟ ಮತ್ತು ಅಪ್ರತಿಮವಾಗಿದೆ. ಅಂಬೇಡ್ಕರ್ ಅವರು ಕೇವಲ ಸಂವಿಧಾನ ಶಿಲ್ಪಿ ಅಥವಾ ಶೋಷಿತ ಜನಸಮುದಾಯಗಳ ಜನಜಾಗೃತಿಯ ನಾಯಕನಷ್ಟೇ ಅಲ್ಲ; ಭಾರತೀಯ ಸಮಾಜದ ನೈತಿಕ ಪುನರ್‌ರಚನೆಗೆ ದಾರಿದೀಪವಾದ ತತ್ವ–ಚಿಂತಕರೂ ಆಗಿರುತ್ತಾರೆ. ಅಂಬೇಡ್ಕರ್ ಅವರ ಚಿಂತನೆಗಳ ಕೇಂದ್ರ ಬಿಂದುವಿನಲ್ಲಿ ಸಮಾನತೆ, ಸ್ವಾತಂತ್ರ್ಯ ಮತ್ತು ಭ್ರಾತೃತ್ವ ಎಂಬಂತಹ ಜೀವಪರ ಹಾಗೂ ಮಾನವಪರ ಮೌಲ್ಯಗಳು ನೆಲೆಗೊಂಡಿರುತ್ತವೆ. ಈ ಮೌಲ್ಯಗಳು ಅಂಬೇಡ್ಕರ್ ಅವರ ನಾಗರಿಕ ಸಮಾಜದ ಪರಿಕಲ್ಪನೆಯ ಮೂಲಾಧಾರವಾಗಿವೆ.

ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ಸಾಂವಿಧಾನಾತ್ಮಕ ನೈತಿಕತೆ ಎಂದರೆ; ಸಂವಿಧಾನದ ಮೌಲ್ಯಗಳಿಗೆ ಆಂತರಿಕ ನಿಷ್ಠೆ ಕಾನೂನು ಪ್ರಾಮುಖ್ಯತೆಯ ಗೌರವ ಸಂಸ್ಥೆಗಳ ಕಾರ್ಯಪದ್ಧತಿಗೆ ಬದ್ಧತೆ ವೈಯಕ್ತಿಕ ಅಥವಾ ಬಹುಮತದ ಮನೋಭಾವಕ್ಕಿಂತ ಮೌಲ್ಯಾಧಾರಿತ ನಿರ್ಧಾರ ಅಂಬೇಡ್ಕರ್ ಅವರು ಎಚ್ಚರಿಸಿದರು. ಭಾರತದಲ್ಲಿ ಪ್ರಜಾಸತ್ತಾತ್ಮಕ ಪರಂಪರೆ ಸ್ವಾಭಾವಿಕವಾಗಿ ಬೆಳೆಯಲಿಲ್ಲ; ಆದ್ದರಿಂದ ಸಾಂವಿಧಾನಾತ್ಮಕ ನೈತಿಕತೆಯನ್ನು ಜಾಗೃತಿಯಿಂದ ಬೆಳೆಸಬೇಕು. ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ಸಂವಿಧಾನವು ಕೇವಲ ಆಡಳಿತದ ಯಂತ್ರವಲ್ಲ; ಅದು ಸಾಮಾಜಿಕ ಪರಿವರ್ತನೆಯ ಸಾಧನವಾಗಿದೆ. ಭಾರತ ಸಂವಿಧಾನದ ಪ್ರಸ್ತಾವನೆಯಲ್ಲಿ ಉಲ್ಲೇಖಗೊಂಡಿರುವ ಮೌಲ್ಯಗಳಾಗಿರುವಂತಹ ಸಮಾನತೆ, ಸ್ವಾತಂತ್ರ್ಯ, ನ್ಯಾಯವು ಸಾಮಾಜಿಕ, ಆರ್ಥಿಕ, ರಾಜಕೀಯವಾಗಿದೆ. ಭ್ರಾತೃತ್ವ ತತ್ವಗಳು ಕೇವಲ ಕಾನೂನುಪರ ಘೋಷಣೆಗಳಲ್ಲ; ಅವುಗಳು ನಾಗರಿಕ ಸಮಾಜದ ದಿನನಿತ್ಯದ ಬದುಕಿನ ನೈತಿಕ ಮಾರ್ಗಸೂಚಿಗಳಾಗಿರುತ್ತವೆ.

ನಾಗರಿಕ ಸಮಾಜವು ಸಾಂವಿಧಾನಾತ್ಮಕ ಮೌಲ್ಯಗಳನ್ನು ಅಳವಡಿಸಿಕೊಳ್ಳದಿದ್ದರೆ, ಅದು ಕೇವಲ ಶಕ್ತಿಸಂರಚನೆಯ ವೇದಿಕೆಯಾಗಿ ಮಾರ್ಪಡಬಹುದು. ಸಮಾನತೆಯು ಜಾತಿ, ಲಿಂಗ, ಧರ್ಮ ಆಧಾರಿತ ಭೇದಭಾವಕ್ಕೆ ವಿರೋಧವಾಗಿದೆ. ಸ್ವಾತಂತ್ರ್ಯವು ಅಭಿವ್ಯಕ್ತಿ, ನಂಬಿಕೆ ಮತ್ತು ಸಂಘಟನೆಯ ಹಕ್ಕುಗಳ ರಕ್ಷಣೆಯಾಗಿದೆ. ನ್ಯಾಯವು ಹಿಂದುಳಿದ ವರ್ಗಗಳಿಗೆ ಅವಕಾಶ ಸಮಾನತೆಯಾಗಿದೆ. ಧರ್ಮನಿರಪೇಕ್ಷತೆಯು ಧಾರ್ಮಿಕ ವೈವಿಧ್ಯತೆಯ ಗೌರವವಾಗಿದೆ. ಈ ಮೌಲ್ಯಗಳು ನಾಗರಿಕ ಸಂಘಟನೆಗಳ ಚಟುವಟಿಕೆಗಳಿಗೆ ದಿಕ್ಕು ತೋರಿಸುತ್ತವೆ. ಅಂಬೇಡ್ಕರ್ ಅವರ ಎಚ್ಚರಿಕೆಯು ಸ್ಪಷ್ಟವಾಗಿ; ರಾಜಕೀಯ ಪ್ರಜಾಸತ್ತಾತ್ಮಕತೆ ಸಾಮಾಜಿಕ ಮತ್ತು ಆರ್ಥಿಕ ಪ್ರಜಾಸತ್ತಾತ್ಮಕತೆಯೊಂದಿಗೆ ಸಂಧಾನಗೊಳ್ಳಬೇಕು. ಇಲ್ಲದಿದ್ದರೆ, ಸಂವಿಧಾನವು ಕಾಗದದ ಮೇಲಿನ ಪಠ್ಯವಾಗಿಯೇ ಉಳಿಯುತ್ತದೆ. ಹೀಗಾಗಿ, ಸಾಂವಿಧಾನಾತ್ಮಕ ನೈತಿಕತೆಯು ಕೇವಲ ನ್ಯಾಯಾಲಯಗಳ ಅಥವಾ ಶಾಸನ ಮಂಡಳಿಗಳ ವಿಷಯವಲ್ಲ; ಅದು ನಾಗರಿಕರ ದಿನನಿತ್ಯದ ಜೀವನದಲ್ಲಿ ಪ್ರತಿಫಲಿಸಬೇಕಾದ ನೈತಿಕ ಚೇತನವಾಗಿದೆ.

**ಉಪಸಂಹಾರ**

ಅಂಬೇಡ್ಕರ್ ಅವರ ಸಂವಿಧಾನಾತ್ಮಕ ನೈತಿಕತೆ ನಾಗರಿಕ ಸಮಾಜದ ಆಂತರಿಕ ಶಿಸ್ತು ಮತ್ತು ಮೌಲ್ಯಾಧಾರಿತ ಚೇತನವನ್ನು ರೂಪಿಸುತ್ತದೆ. ಸಂವಿಧಾನವು ಆಡಳಿತದ ಸಾಧನವಾಗಿರುವುದಕ್ಕಿಂತ ಹೆಚ್ಚಾಗಿ, ಅದು ಸಾಮಾಜಿಕ ಕ್ರಾಂತಿಯ ಮಾರ್ಗಸೂಚಿಯಾಗಿದೆ. ಸಮಾನತೆ, ಸ್ವಾತಂತ್ರ್ಯ, ನ್ಯಾಯ ಮತ್ತು ಧರ್ಮನಿರಪೇಕ್ಷತೆ ಎಂಬ ಮೌಲ್ಯಗಳನ್ನು ಅನುಷ್ಠಾನಗೊಳಿಸುವ ಸಮಾಜವೇ ನಿಜವಾದ ನಾಗರಿಕ ಸಮಾಜವಾಗುತ್ತದೆ ಎಂಬುದು ಅಂಬೇಡ್ಕರ್ ಅವರ ದೃಢ ನಿಲುವಾಗಿದೆ. ಈ ಸಂಶೋಧನಾ ಕೃತಿಯ ಉದ್ದೇಶ ಅಂಬೇಡ್ಕರ್ ಅವರ ನಾಗರಿಕ ಸಮಾಜದ ಪರಿಕಲ್ಪನೆಯನ್ನು ತಾತ್ವಿಕ, ಸಾಮಾಜಿಕ ಮತ್ತು

ಸಂವಿಧಾನಾತ್ಮಕ ಆಯಾಮಗಳಲ್ಲಿ ವಿಶ್ಲೇಷಿಸುವುದಾಗಿದೆ. ಜಾತಿರಹಿತತೆ, ಸಮಾನತಾಪರತೆ, ಸಂವಿಧಾನಾತ್ಮಕ ನೈತಿಕತೆ ಮತ್ತು ನೈತಿಕ ಪ್ರಜಾಸತ್ತಾತ್ಮಕತೆ ಎಂಬ ಅಂಶಗಳ ಮೂಲಕ ಅವರ ಚಿಂತನೆಗಳನ್ನು ಸಮಗ್ರವಾಗಿ ಅಧ್ಯಯನ ಮಾಡುವುದು ಈ ಅಧ್ಯಯನದ ಪ್ರಧಾನ ಗುರಿಯಾಗಿದೆ. ಸಮಕಾಲೀನ ಭಾರತದಲ್ಲಿ ಮಾನವ ಹಕ್ಕುಗಳು, ದಲಿತ ಚಳುವಳಿ, ಮಹಿಳಾ ಹಕ್ಕುಗಳ ಹೋರಾಟ ಮತ್ತು ಸಂವಿಧಾನಾತ್ಮಕ ಮೌಲ್ಯಗಳ ರಕ್ಷಣೆಯ ಸನ್ನಿವೇಶದಲ್ಲಿ ಅಂಬೇಡ್ಕರ್ ಅವರ ನಾಗರಿಕ ಸಮಾಜದ ಕಲ್ಪನೆ ಅತ್ಯಂತ ಪ್ರಸ್ತುತವಾಗಿದೆ. ಆದ್ದರಿಂದ, ಈ ಅಧ್ಯಯನವು ಅಂಬೇಡ್ಕರ್ ಅವರ ಮೂಲ ಚಿಂತನೆಗಳನ್ನು ಇತಿಹಾಸದ ಸೀಮಿತ ಪಠ್ಯವಸ್ತುವಾಗಿ ನೋಡದೆ, ಸಮಕಾಲೀನ ಸಾಮಾಜಿಕ ಪರಿವರ್ತನೆಗೆ ದಾರಿದೀಪವಾಗುವ ತಾತ್ವಿಕ ದೃಷ್ಟಿಕೋನವಾಗಿ ಮರುಪರಿಗಣಿಸುತ್ತದೆ.

## ಗ್ರಂಥಸೂಚಿ


- Ambedkar.B.R, *Annihilation of Caste*, 1936
- Ambedkar.B.R, Speech at the Round Table Conference, 1931
- Ambedkar.B.R, *States and Minorities*, 1947
- Ambedkar.B.R, *The Buddha and His Dhamma*, 1957
- Constituent Assembly Debates, 25 November 1949, Vol-VII
- Eleanor Zelliot, *From Untouchable to Dalit*, 1992
- Granville Austin, *The Indian Constitution: Cornerstone of a Nation*, 1966